# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 5-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಪಾಮೆಣ್ಣೆಗೆ ಬೇಡಿಕೆ ಇಳಿಕೆಯಾಗಬಹುದೇ ?

ಜಾಗತಿಕ ವಲಯಗಳಲ್ಲಿ ಖಾದ್ಯ ತೈಲ ಪೂರೈಕೆಯ ವ್ಯತ್ಯಯ ಮಿತಿಮೀರಿದ ದರ ಹೆಚ್ಚಳ ಇವುಗಳಿಂದ ಜಾಗತಿಕ ಪಾಮೆಣ್ಣೆ ಬಳಕೆಯ ಧ್ರುವೀಕರಣದಿಂದ ವಿಕೇಂದ್ರೀಕರಣಕ್ಕಿಳಿಯುವ ಸಾಧ್ಯತೆಯಿದೆ. ಪಾಮೆಣ್ಣೆ ಬಳಕೆಯ ಏಕಸ್ವಾಮ್ಯದಿಂದ ಹಾಗೂ ಪೂರೈಕೆಯ ವ್ಯತ್ಯಯ ಉತ್ಪಾದನೆ ಇಳಿಕೆಯಿಂದ ಇತ್ತೀಚಿನ ವರ್ಷಗಳಲ್ಲಿ ಪಾಮೆಣ್ಣೆ ದರ ತೀವ್ರ ಹೆಚ್ಚಳಗೊಂಡಿದೆ. ಪರ್ಯಾಯ ಜಾಗತಿಕ ಖಾದ್ಯ ತೈಲಗಳಾದ ಸೋಯಬೀನ್ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಳ ದರಗಳೂ ತೀವ್ರ ಹೆಚ್ಚಳಗೊಂಡಿದೆ. ಇದರಿಂದ ಜಾಗತಿಕ ಖಾದ್ಯತೈಲ ಬಳಕೆದಾರರು ಸ್ಥಳೀಯವಾಗಿ ದೊರೆಯುವ ಇತರ ಖಾದ್ಯತೈಲ ಉದಾ:ಭಾರತದಲ್ಲಿ ನೆಲಗಡಲೆ ಎಣ್ಣೆ, ಸಾಸಿವೆ ಎಣ್ಣೆ, ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಇತ್ಯಾದಿ ಹಾಗೂ ಬೇರೆ ದೇಶಗಳಲ್ಲಿ ಅಲ್ಲಿಯ ಸ್ಥಳೀಯ ಲಭ್ಯ ಖಾದ್ಯತೈಲಗಳ ಬಳಕೆ ಹೆಚ್ಚಳಗೊಳಿಸುವ ಸಾಧ್ಯತೆಯಿದೆ. ಸ್ಥಳೀಯ ಪರ್ಯಾಯ ಖಾದ್ಯತೈಲಗಳ ಬಳಕೆ ಜಾಗತಿಕವಾಗಿ ಹೆಚ್ಚಳಗೊಂಡರೆ ಮುಂದಿನ ದಿನಗಳಲ್ಲಿ ಜಾಗತಿಕ ಏಕಸ್ವಾಮ್ಯ ಬಳಕೆಯ ಖಾದ್ಯತೈಲಗಳ ಬೇಡಿಕೆ ಕುಸಿತಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಮುಂದಿನ ತಿಂಗಳುಗಳಲ್ಲಿ ಪಾಮೆಣ್ಣೆ, ಸೋಯಾಬೀನ್ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಳ ಉತ್ಪಾದನೆಯೂ ಅಧಿಕವಾದರೆ ಅವುಗಳ ಜಾಗತಿಕ ದರಗಳೂ ಮುಂದಿನ ಕೆಲವು ತಿಂಗಳುಗಳಲ್ಲಿ ಇಳಿಕೆ ಕಾಣುವ ಸಾಧ್ಯತೆಯಿದೆ.